ಸರ್ಕಾರಿ ಜಮೀನಿನಲ್ಲಿ ವಾಸವಾಗಿರುವವರಿಗೆ ಹಕ್ಕು ಪತ್ರ ನೀಡುವುದು

2115 (3485); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಸರ್ಕಾರಿ ಜಮೀನಿನಲ್ಲಿ ಅನೇಕ ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸವಾಗಿರುವ ಬಡ ನಿವೇಶನರಹಿತರಿಗೆ ಹಕ್ಕುಪತ್ರ ನೀಡುವ ಸರ್ಕಾರ ತೀರ್ಮಾನ ಕೈಗೊಂಡಿದೆಯೇ; ಹಾಗಿದ್ದಲ್ಲಿ ಕೈಗೊಂಡ ಕ್ರಮದ ವಿವರ ನೀಡುವುದು;

ಆ) ಚಿಕ್ಕಬಳ್ಳಾಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಇಂತಹ ಪ್ರಕರಣದಡಿ ಎಷ್ಟು ಜನರು ವಾಸವಾಗಿದ್ದಾರೆ; (ಸಂಪೂರ್ಣ ವಿವರ ನೀಡುವುದು)

ಇ) ಚಿಕ್ಕಬಳ್ಳಾಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷ ಅವಧಿಯಲ್ಲಿ ಭೂ ಮಂಜೂರಾತಿ ನಿಯಮಾವಳಿಗಳನ್ನು ಉಲ್ಲಂಘಿಸಿದವರ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ;

ಈ) ಈ ಪ್ರಕರಣಗಳ ವಿಚಾರಣೆ ಯಾವ ಹಂತದಲ್ಲಿದೆ;

ಉ) ಸದರಿ ಪ್ರಕರಣದಲ್ಲಿ ಎಷ್ಟು ಮಂದಿಗೆ ಭೂ ಮಂಜೂರಾತಿ ರದ್ದಾಗಿದೆ; (ವಿವರ ನೀಡುವುದು)

ಊ) ಕಳೆದ ಮೂರು ವರ್ಷದಲ್ಲಿ ಭೂ ಮಂಜೂರಾತಿ ಸಮಿತಿ ಅಂಗೀಕರಿಸಿರುವ ನಿರ್ಣಯಗಳು ಎಷ್ಟು; (ವಿವರ ನೀಡುವುದು)

ಋ) ಭೂ ಮಂಜೂರಾತಿಗೆ ಸಂಬಂಧಿಸಿದಂತೆ 1998 ರ (ಕಟ್ ಆಫ್ ದಿನಾಂಕ) ಅಂತ್ಯದವರೆಗಿನ ನಮೂನೆ 53 ರ ಅಡಿಯಲ್ಲಿ ಅರ್ಜಿ ಸ್ವೀಕರಿಸಿರುವ ಬಗ್ಗೆ ನೋಂದಣಿ ಪುಸ್ತಕ ನಿರ್ವಹಿಸಲಾಗಿದೆಯೇ? (ಪೂರ್ಣ ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಹೌದು.

ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94ಸಿ ಅಡಿಯಲ್ಲಿ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 47 ಶಾಸನ 2012 ದಿನಾಂಕ: 11–07–2013 ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಕಂದಾಯ ಜಮೀನುಗಳಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಕಾಯ್ದೆ 2012ನ್ನು ಜಾರಿಗೊಳಿಸಿದೆ. ಕರ್ನಾಟಕ ಭೂಕಂದಾಯ ಕಾಯ್ದೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 376 ಎಲ್‌ಜಿಪಿ 2013 ದಿನಾಂಕ:03–03–2014 ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ರೂಪಿಸಲಾಗಿದೆ.

ಆ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕರಣಗಳು ವರದಿ ಮಾಡಲ್ಪಟ್ಟಿವೆ.

ಎ) ಗೌರಿಬಿದನೂರು ತಾಲ್ಲೂಕು, ಮಂಚೇನಹಳ್ಳಿ ವ್ಯಾಪ್ತಿಯಲ್ಲಿ 42 ಪ್ರಕರಣಗಳು.

ಬಿ) ಚಿಕ್ಕಬಳ್ಳಾಪುರ ಸಿ.ಎಂ.ಸಿ ವ್ಯಾಪ್ತಿ (ಸಿ.ಎಂ.ಸಿ ಕಮೀಷನರ್ ವರದಿ ಮೇರೆಗೆ) ಯಾವುದೂ ಇರುವುದಿಲ್ಲ.

ಸಿ) ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ (ಗ್ರಾಮೀಣ ಪ್ರದೇಶಗಳು) ಯಾವುದೂ ಇರುವುದಿಲ್ಲ.

ಇ) ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 12 ಸಭೆಗಳನ್ನು ನಡೆಸಲಾಗಿದೆ.

ಋ) 1998 ರ ಕಟಾಫ್ ರೇಟ್ ಕಲಂ 94(ಸಿ) ಅರ್ಜಿಗಳಿಗೆ ಸಂಬಂಧಪಟ್ಟಿರುತ್ತದೆ ಮತ್ತು ಈ ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಮತ್ತು ಟಿ.ಎಂ.ಸಿ, ಸಿ.ಎಂ.ಸಿ ಗಳಲ್ಲಿ ಕಲಂ 94(ಸಿ ಅಡಿಯಲ್ಲಿ ಸ್ವೀಕೃತವಾಗಿದ್ದ ಅರ್ಜಿಗಳ ಸ್ವೀಕೃತಿ ಮತ್ತು ನೋಂದಣಿ ವಹಿಗಳನ್ನು ನಿರ್ವಹಿಸಲಾಗಿದೆ. ಇದೇ ರೀತಿ ಕಲಂ 94(ಬಿ) ರಡಿಯಲ್ಲಿ ಸ್ವೀಕೃತವಾದ ಸಕ್ರಮೀಕರಣ ಕೋರಿಕೆ ಅರ್ಜಿಗಳನ್ನು ಸಹಾ ವಿಶೇಷ ನಮೂನೆಯಲ್ಲಿ ದಿನಾಂಕ: 30/04/1999 ರವರೆಗೆ ನೋಂದಾಯಿಸಲಾಗಿರುತ್ತದೆ.

ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ಏಳಿಗೆಗಾಗಿ ಯೋಜನೆಗಳು

2116 (3487); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) 2013–14ನೇ ಸಾಲಿನಲ್ಲಿ ಅಸಂಘಟಿತ ಹಾಗೂ ಸಂಘಟಿತ ಕಾರ್ಮಿಕರ ಏಳಿಗೆಗೆ ಇಲಾಖೆ ಯಾವ ಯಾವ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ ಮತ್ತು ಅದಕ್ಕೆ ಮೀಸಲಿಟ್ಟ ಮೊತ್ತ ಎಷ್ಟು;

ಆ) 2013–14ನೇ ಸಾಲಿನಲ್ಲಿ ಜಾರಿಗೆ ತಂದ ಯೋಜನೆಗಳ ಲಾಭ ಸಂಬಂಧಿಸಿದ ಕಾರ್ಮಿಕರಿಗೆ ಪರಿಣಾಮಕಾರಿಯಾಗಿ ಲಭಿಸಿದೆಯೇ: ಎಷ್ಟು ಕಾರ್ಮಿಕರು ಇದರ ಲಾಭ ಪಡೆದಿದ್ದಾರೆ;

ಇ) 2014–15ನೇ ಸಾಲಿನಲ್ಲಿ ಅಸಂಘಟಿತ ಹಾಗೂ ಸಂಘಟಿತ ಕಾರ್ಮಿಕರ ಏಳಿಗೆಗೆ ಸರ್ಕಾರ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು; ಇದಕ್ಕಾಗಿ ಮೀಸಲಿಟ್ಟಿರುವ ಅನುದಾನದ ಮೊತ್ತ ಎಷ್ಟು;

ಈ) ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿಯಲ್ಲಿ ಮತ್ತು ಎನ್‌ಪಿಎಸ್ ಲೈಟ್ ಸ್ವಾವಲಂಬನ್ ಯೋಜನೆಯಡಿಯ ವ್ಯಾಪ್ತಿಗೆ ಎಷ್ಟು ಕಾರ್ಮಿಕರು ಬರುತ್ತಾರೆ. ಈ ಯೋಜನೆ ಪ್ರಾರಂಭವಾದ ಮೇಲೆ ಎಷ್ಟು ಕಾರ್ಮಿಕರನ್ನು ಈ ಪಟ್ಟಿಗೆ ಸೇರಿಸಿಕೊಳ್ಳಲಾಗಿದೆ;